ಕುಡಿ...'

ಅವಳು ಮರು ಮಾತಿಲ್ಲದೆ ಅವನು ಕೊಟ್ಟ ಔಷಧ ಸ್ವೀಕರಿಸಿದಳು.

'ನಾ ಕಲ್ತೋನಲ್ಲ. ಆದ್ರು ನಾಟಿ ಔಷಧಿಯಾಗ ನಂಬ್ಕಿ ಇಟ್ಟೋನು. ಈ ಔಷಧಿ ನಿನ್ನ ಅಳಕ್ ಕಮ್ಮಿ ಮಾಡತ್ತೈತಿ...'

ಗಂಗ ಔಷಧಿ ಕುಡಿದರೂ ಅನುಮಾನ ಕಾಡದಿರಲಿಲ್ಲ! ತನಗೂ ಕೂಸಿಗೂ ಔಷಧಿ ಕೊಡುವುದರಲ್ಲಿ ಇವನ ಉದ್ದೇಶ ಏನಿರಬಹುದು? ಇವನು ವಿಷವನ್ನೇ ಉಣಿಸಿರಬಹುದು! ಅವಳೆಂದಳು.

'.... ನೀ.... ದವ ಕೊಟ್ಟೇ ಇಲ್ಲ. ವಿಷ ಕೊಟ್ಟೋ... ನಾ ತಿಳಿದಿಲ್ಲ. ನಾನು ಕೂಸಿನ ಸಮೇತ ಜೀವ ಬಿಡ್ಲಿಕ್ಕೆ ಯೋಚ್ನೇ ಮಾಡ್ಲಿಕೆ ಹತ್ತಿದ್ದೆ.... ನಂಗ್ಯಾವ ಭಯಾನೂ ಇಲ್ಲ.... ನೀನು ಇಷನೇ ಕೊಟ್ಟಿರ್ಲಿಕ್ಕೇ ಬೇಕು... ಬೇಸಾಯ್ತು!...'

'... ನೀನು ನನ್ನ ತಿಳ್ಕಂಡಿಲ್ಲ ಗಂಗಾ. ತಿಳ್ಕಾಳಾದೂ ಇಲ್ಲ... ನಿಮಗೆ ವಿಷ ಕೊಟ್ಟಿಲ್ಲ....' ಎಂದವಳ ಭುಜದ ಮೇಲೆ ಕೈ ಇರಿಸಿದ. 'ನೀ ನಡತೆ ಕೆಡಿಸ್ಕೊಂಡಿರೋದು ಖರೆ... ನಂಗೆ ಮೋಸ ಮಾಡಿದ್ದೇ ಖರೆ. ಆದ್ರೆ ನೀನು ನನ್ನ ಕೂಡೆ ಬರ್ಲಿಕ್ಕೆ ಮನ್ಸು ಮಾಡು... ಈ ಕೂಸಿನ ತಂದಿಯಾರು?... ಅದ್ನ ಹೇಳು...'

'ಹೇಳಾ ಹಂಗಿಲ್ಲ... ನೀ ಹೋಗಿ ಬಿಡು .... ನನ್ನ ಗಂಡ ನೀನು ಅಂತ ಎಲ್ರಿಗೂ ತಿಳ್ಯೋ ಮುಂದೆ ನೀ ಹೊರಡ್ಲಿಕ್ಕೆ ಹತ್ತು...'

ಅವನು ನಸುನಗುತ್ತಾ 'ನಾ ಹೋಗದೂ ಬಿಡಾದು ನನ್ನಿಚ್ಚೆ! ... ಆದ್ರ ನಿನ್ನ ಗಂಡ ಅಂತ ನಾನು ಯಾರ ಮುಂದೇನೂ ಹೇಳೋದಿಲ್ಲ... ನೀನು ಹೇಳ ಬ್ಯಾಡ...' ಮಾತು ಮುಗಿಸುತ್ತಲೇ ಶಿವಣ್ಣ ಅಲ್ಲಿದ್ದ ಜಾಯಿಕಾಯಿ ಮರದ ಪೆಟ್ಟಿಗೆ ಮೇಲೆ ಕೂತು ಬಿಟ್ಟನು.

'ಗಂಗೀ... ನಾ ನಿನ್ನ ಏನೂ ಕೇಳೂದಿಲ್ಲ. ಆದ್ರೆ ಹೇಳು, ನೀ ಯಾಕೆ ಹಿಂಗೆ ಮೋಸ ಮಾಡ್ದಿ? ನಾ ನಿನ್ನ ಛಲೋದಾಗಿ ನೋಡ್ಕಂಡಿದ್ದಿ ಅಂತಾ ನಾ ಹೇಳೋದಿಲ್ಲ..... ನನ್ನ ಕಾರುಬಾರುಗಳಿಂದ ನಿನ್ನಂತ ಸಣ್ಣ ವಯಸ್ಸಿನ ಹೆಂಣ್ತೀಗೆ ಬೇಕಾದ್ದು ನಾನು ಕೊಡ್ಲಿಲ್ಲ. ಅನ್ನಸ್ತೈತಿ.

'ನಿನ್ನ ಮಂಗ್ಯಾನಂತೆ ಮನಸ್ಸು ಏನೆಲ್ಲಾ ಚಾಷ್ಟಿ ಮಾಡ್ತದೆ ಅನ್ನೋದು. ನಾನು ತಿಳಿದೇ ಹೋದೆ.... ಊರ ಮಂದಿನೆಲ್ಲಾ ನನ್ನ ಮೆಚ್ತಾರ... ನೀನೂ ಅವ್ರ ಪೈಕಿ ಇದೀ ಅಂತ ತಿಳ್ದಿದ್ದೆ.... ಆದ್ರೆ ನಾನು ಅಕಲ್‌ಮಂದ್ ಮನುಷ್ಯ... ನಿನ್ನ ನೀತಿವಂತಳು ಎಂದು ತಿಳ್ದು ಮೋಸ ಹೋದೆ.... ನೀನು ಹೀಂಗ ಮೋಸ ಮಾಡ್ತಿ ಅಂಬೋ ಖಬ್ರು ನಂಗಿರ್ಲಿಲ್ಲ.... ಉಡಿಯಲ್ಲಿ ಕೆಂಡ ತುಂಬ್ಕೊಂಡು ನನ್ನೊಂದಿಗೆ ಬಾಳ್ವೆ ಮಾಡ್ತಿ ಅಲ್ವಾ?'

ಉಡಿಯಲ್ಲಿ ಕೆಂಡ ಎಂದಾಗ ಅವಳ ಎದೆ ಉರಿದು ಹೋಯಿತು. ಅವಳು ಕ್ರೋಧವಾಗಿ ಅಂದು ಬಿಟ್ಟಳು.

'ನಾನಾಗ ಏನೂ ತಿಳೀದ ಪೋರಿ ಇದ್ದಿ. ನೀ ಮಾಡಿದ್ದು ನಾ ಕೇಳಬೇಕು, ನೀ ನನ್ನ ಗಂಡ ಅಂತ ಸುಮ್ಮನಿದ್ದಿ. ಆದ್ರೂ ಹಂಗನ್ನೀಯ?... ನೀ ನಂಗೋಗೂ ಹೆಂಡ್ತಿ ಅಂತ ಹತ್ರ ಮಾಡ್ಕೊಳ್ಳಿಲ್ಲ. ಅದ್ನೂ ಸಹಿಸ್ಕೋಳೋಕೆ ಹತ್ತಿದ್ದೆ!...'

ಅವನು ಮುಖ ಬಾಗಿಸಿಕೊಂಡ 'ಅಲ್ಲಿ ನನ್ನದೂ ತಪ್ಪೈತಿ.... ಇಲ್ಲ ಅನ್ನೂ ಹಂಗಿಲ್ಲ.... ಆದ್ರ, ಈಗ ನೋಡು ನಾ ಒಂಟಿಯಾಗ್ಯೋದೆ. ಊರೆಲ್ಲಾ ನನ್ನ ಕಂಡು ಮರುಕ ಮಾಡ್ತೈತೆ. ನೀನು ಈಗಲಾದರೂ ನನ್ನೊಂದಿಗೆ ಬಾ... ಈಗ ಛಲೋ ನೋಡ್ತೀನಂತ.

'ನಮ್ಮಿಬ್ಬರದ್ದೂ ತೆಪ್ಪಾಗೈತಿ...' ಎಂದಳು ಗಂಗೆ ಮೆದುವಾಗಿ.

'ಬಿಡಲೇ ತಪ್ಪು ಆದದ್ದು ನನ್ನಿಂದ. ಸಣ್ಣ ವಯಸ್ಸಿನ ನಿನ್ನ ಆಸೆ, ಬಯ್ಕೆಗಳು ತಿಳೀಲಿಲ್ಲ ನಾನು.... ಬುದ್ದಿ ಇಲ್ಲದ ಕತ್ತೆ ಹಾಂಗ ಬರೀ ಕೆಲ್ಸದ ಮ್ಯಾಲೇ ಇರ್‍ಲಿಕ್ ಹತ್ತಿದ್ದೆ. ಹೆಂಡ್ತೀನ ಹ್ಯಾಂಗ ಬಾಳಿಸಬೇಕೊ ಹಾಂಗ ಬಾಳಿಸ್ಲಿಲ್ಲ. ನಮ್ಮಿಬ್ಬರ ಸಂಬಂಧ ಕೊಳ್ಳಾಕೆ ಹತ್ತಿದೆ ಅಂಬೂದೂ ನಂಗ ಅರಿವಾಗಿಲ್ಲ. ತಪ್ಪು ನನ್ನ ಕಡೀಗೂ ಅದೆ. ಆದ್ರಾ, ಆ ಸುದ್ದಿ ಹಾಂಗಿರ್‍ಲಿ.... ಈಗ ಇಷ್ಟು ಮಾತ್ರಾ ನಿರೀಕ್ಷಿಸಿದ್ದೇ ಒಳಿತು. ನಮ್ಮಿಬ್ಬರ ನಡೂಕೆ ಗೋಡೆ ಎಬ್ಬಿಸಿ ನಿನ್ನ ಕೈಗೆ ಕೂಸು ಕೊಟ್ಟ ಆ ಬಿಕನಾಸಿಯಾರು...?'

'ಅದನ್ನ ಕೇಳ್‌ಬ್ಯಾಡಾಂತ ಹೇಳ್ಲಿಲ್ಲೇನು?... ಅದನ ಯಾರಿಗೂ ನಾ ಹೇಳುದಿಲ್ಲ...'

ಅವನು ಕಹಿಯಾಗಿ ನಕ್ಕು 'ನೀ ಹ್ಯಾಳ್ಲೇ ಬ್ಯಾಡ! ಒಟ್ಟಿಗೇ ಪ್ರಾಣಿ ಬ್ಯಾಡದ ಇಚಾರ ಯಾಕೆ ಹೇಳ್ ಬ್ಯಾಕು ಅಂತ ನನ್ನ ಕಣ್ಣಿಗೆ ಧೂಳು ಕೂರಬಿದ್ದು ..... ಆದ್ರೆ ತಿಳ್ಕು... ಗಾಳಿಲಿ ಪಾರಿವಾಳ ತೆಗ್ಯೊ ಜಾದೂಗಾರ್ನ ಹಾಂಗ ನಾನು ಮಾಯದಲ್ಲೇ ಅವನ್ನ ತಿಳ್ಕಂತೀನಿ... ನಾನು ಇದನ್ನು ಹೀಂಗಾ ಬಿಡೋವ್ನಲ್ಲ....' ಅವನ ಕಣ್ಣಿನ ಭರ್ಜಿ ಅವಳ ಎದೆಯನ್ನು ತಿವಿಯಿತು. 'ನೋಡು ಗಂಗೀ... ನೀ ಅವ್ನ ಹೆಸ್ರು ಹ್ಯಾಂಗೆ ಗುಟ್ಟಾಗಿ ಇಡಲಿಕ್ ಹತ್ತಿದ್ದೈ... ಹಾಗೇ ನಾನು ಅವ್ನು ನರಳೋದು ನೋಡ್ಲಿಕೆ ಗಟ್ಟಿ ಮನಸ್ಸು ಮಾಡಿಟ್‌ಕೊಂಡೀನಿ... ತಪ್ಪು ಮಾಡಿದ ನಮ್ಮಿಬ್ಬರಿಗೂ ಸಮ ಸಿಕ್ಷೆ ಆಗ್ಲಿಕ್ಕೇ ಬೇಕು.... ಒಂದು ಹೆಣ್ಣಿಗೆ ಅನ್ನೇಯ ಮಾಡಿ ತಾನು ಸುಖವಾಗಿ ಇರೋ ಆ ಮನೆ ಹಾಳನ್ನು ಹಿಡ್ದು ಅವನ ಬಾಳು ನಾನು ಹಾಳು ಮಾಡ್ತೇನಿ ... ಬಿಡೂದಿಲ್ಲ... ಅವನೆಂತಹ ದೊಡ್‌ಮನುಷ್ಯ ಇರ್‍ಲಿ... ಅವನ ಮಾನ, ಮರ್ಯಾದಿ, ಜೀವ ನಾನು ಮುಷ್ಠಿಲಿ ಕಂಡ್ಕೊಂಡು ಅವ್ನಿಗೆ ತಕ್ಕ ಶಿಕ್ಷೆ ಮಾಡ್ದೇ ಬಿಡೂದಿಲ್ಲ .... ನೀ ... ನೋಡ್ತಾನೇ ಇರು!

ಅವಳು ನಡುಗಿ ಹೋದಳು, 'ಬ್ಯಾಡ್ರೀ... ಈ ರೀತಿ ನಂಜಿನ ಮಾತು ಆಡ್ ಬ್ಯಾಡ್ರೀ....'

'ಹೆಣ್ಣೇ... ತಿಳ್ಕಾ... ಈ ಮೈಸೂರು ಶಹರದಾಗ ನನ್ನ ಬೂನು ಹಿಡಿಯೋ ಮಂದಿ ಇಲ್ಲ. ನಿನ್ನ ಗಂಡ ನಾನು ಅಂಬೋದು ಯಾರಿಗೂ ತಿಳೀದು... ನಾನು ಇಲ್ಲೇ ನನ್ನ ಝೂಂಡಾ ಊರ್‍ಕೋತಿನಿ .... ಎಲ್ಲಂದ್ರಲ್ಲಿ ಸುತ್ತಿ ತಿಳಿಸಿ... ಗಣಸು ವಾಗ ನಾನಿದ್ದೀನಿ... ಆದ್ರ ನಿನ್ನ ಸುತ್ತುಮುತ್ತು ಬಿಟ್ಟು ದೂರ ಹೋಗೂದಿಲ್ಲ!... ರಗ್ದ ಮುಶ್ಕಿಲ್ ಆದ್ರೂ ಸೈ! ಮರ್ಯಾದೆ ಬಿಟ್ಟು ನನ್ನ ಜೀವಕ್ಕೆ ಅಂವ ಬೆಂಕಿ ಇಟ್ಟಾವ... ಅವನ್ನ ಬಿಟ್ಟಾನೇ... ಆದ್ರೆ.... ಒಂದ್ ಮಾತು ನೆಪ್ಪಲ್ಲಿಟ್ಕೊ ಗಂಗಿ .... ನಾನು ನಿನ್ನ ಗಂಡ ಅಂಬೋದು ಬಾಯಿಬಿಟ್ಟಿ ಅಂದ್ರೆ ನಿನ್ನ ಕೂಸು ಹೆಣ ಆಗ್ತೈತಿ... ಕೂಸಿನ ತಂದಿ ಬಗ್ಗೆ ಗುಟ್ಟು ಮಾಡಿದ್ವಾಂಗೇ, ನಾನು ನಿನ್ನ ಗಂಡ ಅಂಬೊ ಸುದ್ದೀನೂ ಗುಟ್ಟಾಗಿ ಇಟ್ಕಳ್ಲಿಕೇ ಬೇಕು... ಕಂಡ್ಯಾ?

'ಹಂಗ್ಯಾಕೆ ಜಿದ್ದು ಮಾಡ್ತೀರಿ... ನಾ ತಪ್ಪು ಮಾಡೀನಿ... ಅದ್ಕೇ 'ಸೋಡಾ ಚೀಟಿ' ಕೊಟ್ಟು ಬ್ಯಾರೆ ಮದ್ವೆ ಮಾಡ್ಕಂಡು ಸುಖವಾಗಿರ್‍ರಿ'.

'ಅದು ಬೇಕಿಲ್ಲ ನಂಗೆ!... ನಂಗೆ ನೀನಾ ಬೇಕು... ಒಟ್ಟಾರೆ ಯಾವ ಹೆಂಣ್ತೀನೂ ನಾ ಒಲ್ಲೆ!... ನನ್ನ ಸುದ್ದಿ ನಿನ್ನ ಬಾಯಾಗೆ ಬರ್ಲಿಕ್ಕೆ ಆಗ್ದು!

'ಗುಟ್ಟಾಗಿ ನೆಪಲ್ಲಿಟ್ಕೋ.... ನೀ ಏನಾರಾ ಬಾಯ್ಬಿಟ್ಟಿ ಅಂದ್ರ ನಾನು ಮನುಷ್ಯನೇ ಆಗಿರ್ಲಿಕ್ಕಿಲ್ಲ...!'

ಗಂಗಿ ರಾಕ್ಷಸನ ಕೈಗೆ ಸಿಕ್ಕ ಗಿಣಿಯಂತಾಗಿ ಬಿಟ್ಟಳು.

'ಆಯ್ತು ನೀವು ನನ್ನ ಗಂಡ ಅಂಬೋದು ಯಾವತ್ತೂ ಹೇಳ್ಲಿಕ್ಕಿಲ್ಲ....'

'ಹಂಗ್ ಬಾ ದಾರಿಗೆ... ಮಾತಿನಿಂದ, ನೋಟದಿಂದ, ಯಾವ್ದೇ ರೀತಿ ನಾನು ನಿಂಗ ಹತ್ತಿರದವ್ನು ಅಂಬೋದು ತೋರಿಸ್ಯಾಬಾರ್ದು... ಕೇಳ್ತು ಅಲ್ಲಾ?....'

'ಹೂಂ ನ್ರೀ...'

'ಭಾಷೆ ಹಾಕು...' ಎಂದು ಕೈ ನೀಡಿದ.

ಅವನ ಕೈ ಮೇಲೆ ತನ್ನ ಕೈ ಇರಿಸಿ, 'ಇಕ್ಕಳ್ರಿ... ದೇವ್ರಾಣೆ ನಿಮ್ಮ ಮಾತು ನಡೆಸಿ ಕೊಡ್ತೀನ್ರಿ...'

'ಸರಿ ಹಂಗಾರ...' ಎಂದು ಹೊರಟು ನಿಂತು ಹೇಳಿದ, 'ನಿನ್ನ ಈ ಎರಡೂ ಗುಟ್ಟಿನ ಸುದ್ದಿ ನಿಂಗ ಹಿಂಪಿ ಮಾಡ್ತಾನೇ ಇರ್‍ಲಿ! ಜೊತೀಗೆ ಈ ಪಾಪದ ಮಾಂಸದ ಮುದ್ದೆನ ಮಡಿಲಲ್ಲಿ ಇಟ್ಕೊಂಡು ಸಾಯ್ತಿರು!' ಎಂದು ನಕ್ಕ

'ನಿಮ್ಮನ್ನು ಕಂಡ್ರೆ ನಂಗೆ ನಡುಕ ಬರ್‍ತೈತಿ – ಯಾಕ್ರೀ ಹಂಗಾ ನಗ್ತೀರಾ?... ನಂಗೇನೊ ಕೆಡಕು ಮಾಡ್ಲಿಕ್ಕೇ ಅಂತ ನೀವು ಬಂದಿದೀರಿ ಅನಿಸ್ಲಿಕ್ ಹತ್ತದೆ...'

'ನಿಂಗೆ... ನಿಂಗಂತೂ ನಾನು ಕೆಟ್ಟದು ಮಾಡೂದು ಇಲ್ಲ!.... ನಿನ್ನ ಊರಿಗೆ ಕರ್ಕೊಂಡ್ ಹೋಗ್ಲಿಕ್ಕೆ ಬಂದಿದ್ನಲ್ವಾ?....' ಎಂದು ಮತ್ತೆ ನಗೆ ಲೇಪಿಸಿಕೊಂಡು ಅವನು ಹೊರಟು ಬಾಗಿಲಿನ ಆಚೆಗೆ ಕಾಲಿಟ್ಟ ವೇಳೆಯಲ್ಲಿ ಶೀನಯ್ಯ ಜೇನು ತುಪ್ಪದ ಬಾಟಲಿ ಹಿಡಿದು ಅವಸರವಾಗಿ ಬಂದ.

'ಜೇನುತುಪ್ಪ ಪೂಜಾರಪ್ಪನ ಮನ್ಲಿ ಇರ್‍ಲಿಲ್ಲ.... ದೇವಸ್ಥಾನದ ಉಗ್ರಾಣದಲ್ಲಿ ದೆಯಂತೆ.... ಆದ್ರೆ ಅದನ್ನು ಯಾರಿಗೂ ಕೊಡೋ ಹಾಗಿಲ್ಲ. ಅದಕ್ಕೇ ಸಾಲಂಗಡಿ ಬಳಿ ಹೋಗಿ ಅಲ್ಲಿಂದ ತಂದೆ. ಅದಕ್ಕೇ ಲೇಟಾತು. ತಗಳ್ರೀ...'

ಶಿವಣ್ಣ, 'ಅದ್ರ ಅವಶ್ಯಕತೆ ಈಗ ಇಲ್ಲ ಶೀನಣ್ಣಾ... ದವಾಖಾನಿಗೆ ಹಾಕಿ ಕೊಟ್ಟಾಯ್ತು.... ಆದ್ರೆ ಕಿಮ್ಮತ್ತು ಎಷ್ಟಾಯ್ತು?

'ಮೂವತ್ತು ರೂಪಾಯಿ ಅಂಗಡಿಯವ್ನು ತಕ್ಕಂಡ....'

'ತಗಳ್ರಿ ಹಣ.... ಆ ಜೇನುತುಪ್ಪ ನೀವಾ ಇಟ್ಕಳ್ರಿ .... ಇಲ್ಲ ಗುಡಿಗೆ ಕೊಟ್ಟು ಬಿಡ್ರಿ.....' ಎಂದು ಒಳ ಚಡ್ಡಿ ಜೇಬಿನಿಂದ ಹತ್ತರ ಮೂರು ನೋಟುಗಳನ್ನು ತೆಗೆದುಕೊಟ್ಟು ಹೊರಟು ಹೋದ.

(ಸಶೇಷ)